Sri VEERENDRA PATIL.—While preventing floods, it is proposed to irrigate lands also.

ಶ್ರೀ ಎನ್. ಜಿ. ಹಾಲಪ್ಪ.—1962ರಲ್ಲಿ ರೆಹೆಜೆಂಟೇಷನ್ ಮೂಲಕ ಬೇಡಿಕೆ ಬಂದಿದ್ದು ಇದ್ದರೆ ಇದುವರೆಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ವೀರೇಂದ್ರ ಪಾಟೀಲ್.—ಇದಕ್ಕೆ ಅನೇಕ ವಿಚಾರ ಮಾಡಿದ್ದೇವೆ. ಅಲ್ಲಿಯ ಪರಿಸ್ಥಿತಿ ಏನಾಗಿದೆ ಅಂದರೆ, ಅನೇಕ ಜನ ಎನ್‌ಕ್ರೋಚಮೆಂಟ್ ಮಾಡಿದ್ದಾರೆ. ಹಳ್ಳದಲ್ಲಿ ಸಿಲ್ಟ್ ಕೂಡಿ ಬಿದ್ದು ಫ್ಲಾಟ್ ಆಗಿರುವುದರಿಂದ ನೀರು ತುಂಬಿ ಭೂಮಿಯಲ್ಲಿ ನೀರು ಹರಿಯುತ್ತದೆ. ಅಲ್ಲಿ ಲ್ಯಾಂಡ್ ರೆಸ್ಟೋರ್ ಮಾಡುತ್ತೇವೆ. ಅದನ್ನು ಆಕ್ವಿಜಿಷನ್ ಮಾಡಬೇಕು, ಕಾಂಪೆನ್‌ಷೇಷನ್ ಕೊಡಬೇಕಾಗುತ್ತದೆ. ಅದರಲ್ಲಿ ಬಹಳ ಕಷ್ಟ ಇದೆ.

Sri A. R. PANCHAGAVI.—May I know, whether any estimate has been prepared with regard to the probable cost of the tanks and whether any action is proposed to be taken to remove to encroachments ?

Sri VEERENDRA PATIL.—Those estimates are not yet ready.

Supply of Water to Pavagada for Irrigation

*Q—495. Sri P. ANJANAPPA (Pavagada).—

Will the Minister for Public Works be pleased to state :—

(*a*) whether it is possible to supply the water of Marikanive or Vedavathi to Pavagada Taluk for irrigation ;

(*b*) whether they would supply water to pavagada Taluk for irrigation from the Upper portion of Kandehally through high level channel ;

(*c*) if not, whether they would supply water at least to Y.N. Hosakote Hobli from Parasuramapura channel ?

A.—Sri VEERENDRA PATIL (Minister for Public Works).—

(*a*) No.

(*b*) No.

(*c*) No.

ಶ್ರೀ ಪಿ. ಆಂಜನಪ್ಪ.—ಪ್ರಶ್ನೆಗೆ ಬಹಳ ನುಲಭವಾಗಿ ಉತ್ತರ ಕೊಟ್ಟಿದ್ದಾರೆ. ಪಾವಗಡ ತಾಲ್ಲೂಕು ಅಭಾವ ಪ್ರದೇಶ ಎನ್ನುವುದು ಗೊತ್ತಿದೆ. ಅಲ್ಲಿ 10-12 ಇಂಚು ಮಳೆಯಾಗುತ್ತೆ. ಬರಗಾಲ ವಿಪರೀತ. ತಡಾವತಿ, ಭದ್ರಾ, ಲಕ್ಕವಳ್ಳಿ ಮುಂತಾದ ಪ್ರಾಜೆಕ್ಟ್‌ಗಳನ್ನು ಕಟ್ಟಿ ಜನರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ. ಪಾವಗಡಕ್ಕೆ ಒಂದು ನಾಲೆ ತೆಗೆದು ಅನುಕೂಲ ಮಾಡಿ ಎಂದರೆ ಸಾಧ್ಯವಿಲ್ಲ ಎಂದು ಹೇಳಿದ್ದಾರೆ. ಅಲ್ಲಿ ನೀರಾವರಿಗೆ ಏನಾದರೂ ಅನುಕೂಲ ಮಾಡಿ ಕೊಡುತ್ತಾರೆಯೇ, ಸ್ವಾಮಿ ?

ಶ್ರೀ ವೀರೇಂದ್ರ ಪಾಟೀಲ್.—ಮಾರಿ ಕಣಿವೆಗೆ ವೇದಾವತಿ ನೀರನ್ನು ನಪ್ಲೈ ಮಾಡಿ ವಾಣಿ ವಿಲಾಸ ಸಾಗರ ಕೆರೆಯನ್ನು ಕಟ್ಟಿಸಿದ್ದಾರೆ: ಅದನ್ನು ಕಟ್ಟುವಾಗ ಯಾವ ಕಾರಣದಿಂದಲೋ 30 ಟಿ.ಎಂ.ಸಿ. ಕೆಪಾಸಿಟಿ ನೀರು ಹಿಡಿಯುವಂತೆ ಮಾಡಿದ್ದಾರೆ. ಅಲ್ಲಿ ಯೀಲ್ಡ್ ಇರುವುದು 6.4 ಟಿ.ಎಂ.ಸಿ. ಇಷ್ಟು ದುಡ್ಡು ಖರ್ಚು ಮಾಡಿದ್ದರೂ ಅದರಲ್ಲಿ ಕಾಲು ಭಾಗ ಕೂಡ ತುಂಬುವುದಿಲ್ಲ. ಅದರ ಕೆಳಗೆ ಇರುವಂಥ ಅಚ್ಚುಕಟ್ಟಿಗೇ ನೀರು ಸಾಲದೆ ಇರುವ ಪರಿಸ್ಥಿತಿಯಲ್ಲಿ ಪಾವಗಡಕ್ಕೆ ನೀರು

(ಶ್ರೀ ವೀರೇಂದ್ರ ಪಾಟೀಲ್)

ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ವಾಣಿವಿಲಾಸ ಸಾಗರ ಬಹುಶಃ 50 ವರ್ಷಕ್ಕೆ ಒಮ್ಮೆ ತುಂಬುತ್ತದೆ ಎಂದು ನನ್ನ ಮುಂದೆ ವರದಿ ಇದೆ. ಇಂಥ ಪರಿಸ್ಥಿತಿ ಇರುವಾಗ, ಅಲ್ಲಿಯ ನೀರನ್ನು ಎರಡನೆ ಕತೆಗೆ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ನೀರಿನ ಅನಾನುಕೂಲತೆ ಇದೆ, ಸಾಕಷ್ಟು ಮಳೆ ಬರುತ್ತ ಇಲ್ಲ. ಅದಕ್ಕಾಗಿ ಅಲ್ಲಿ ಒಂದು ಪ್ರಾಜೆಕ್ಟ್ ಕಟ್ಟಬೇಕೆಂದು ಯೋಚನೆ ಮಾಡುತ್ತಿದ್ದೇವೆ. ನಾಗಲಮಡಿಕೆ ಹತ್ತಿರ ಉತ್ತರ ಪಿನಾಕಿನಿ ರಿಸರ್ವಾಯರ್ ಕಟ್ಟಬೇಕು ಎಂದು ವಿಚಾರ ಮಾಡಿ ಸರಾಸರಿ ಎಷ್ಟು ಅಂದಾಜು ಆಗುತ್ತದೆ ಎನ್ನುವುದನ್ನೆಲ್ಲಾ ಲೆಕ್ಕ ಹಾಕಿದರೆ, 80 ಲಕ್ಷ ರೂಪಾಯಿ ಖರ್ಚು ಮಾಡಿದರೆ 3,600 ಎಕರೆ ಪಾವಗಡ ತಾಲ್ಲೂಕಿನಲ್ಲಿ ನೀರಾವರಿಯಾಗುತ್ತದೆ ಎನ್ನುವುದು ಕಂಡುಬಂದಿದೆ. ಡೀಟೇಲ್ಡ್ ಎಸ್ಟಿಮೇಟ್ ಬಂದಮೇಲೆ ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಬಿ. ಎನ್. ರಾಮೇ ಗೌಡ.—ರಿಸರ್ವಾಯರ್ ಕಾಲು ಭಾಗ ಕೂಡ ತುಂಬುವುದಿಲ್ಲ ಎಂದು ಹೇಳಿದರು. ಅದು ಪೂರಾ ತುಂಬುವುದಿಲ್ಲ ಎನ್ನುವುದು ಗೊತ್ತಿದ್ದೂ ಅದರ ಮೇಲ್ಗಡೆ ನಾರಾಯಣಪುರ ಮತ್ತು ಜವಗನಹಳ್ಳಿ ಹತ್ತಿರ ಎರಡು ಅಣೆಕಟ್ಟು ಕಟ್ಟುವುದಕ್ಕೆ ಅವಕಾಶ ಕೊಟ್ಟಿರುವುದು ನಿಜವೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ನೋಡಿಲ್ಲ. ಅದನ್ನು ವಿಚಾರಿಸುತ್ತೇನೆ.

ಶ್ರೀ ಪಿ. ಆಂಜನಪ್ಪ.—ನಾಗಲಮಡಿಕೆ ಹತ್ತಿರ ಪ್ರಾಜೆಕ್ಟ್ ಕಟ್ಟಿಸಿದರೆ, ಉತ್ತರ ಪಿನಾಕಿನಿ ಜೀವನದಿ ಅಲ್ಲದಿರುವುದರಿಂದ ಹೆಚ್ಚು ನೀರು ಬರುವುದಿಲ್ಲ ಮತ್ತು ಅದರಿಂದ ನಾಗಲಮಡಿಕೆ ಹೋಬಳಿಗೆ ಮಾತ್ರ ಅನುಕೂಲವಾಗಬಹುದು. ಲಕ್ಕವಳ್ಳಿ ಪ್ರಾಜೆಕ್ಟ್ ಬಲಭಾಗದ ನಾಲೆಯಿಂದ ತೆಗೆದುಕೊಂಡು ಬಂದು ಮಾರೀ ಕಣಿವೆಗೆ ನೀರನ್ನು ಬಿಟ್ಟುಕೊಂಡು ಅಲ್ಲಿಂದ ಪಾವಗಡಕ್ಕೆ ನೀರನ್ನು ಒದಗಿಸಿಕೊಡಬಹುದಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಯಾವುದು ಸಾಧ್ಯ ಎನ್ನುವುದನ್ನು ಸವಿಸ್ತಾರವಾಗಿ ಹೇಳಿದ್ದೇನೆ.

Food Control Cases in Aland taluk.

*Q.—591. Sri DIGAMBAR RAO BALAWANT RAO (Aland).—

Will the Minister for Home and Labour be pleased to state :—

the number of cases of contravention of food control orders that have been charge sheeted during the year 1965 and 1966 in Aland Taluk and the results of the cases ?

A.—Sri M. V. RAMA RAO (Minister for Home and Labour).—

Year	No. of cases charge-sheeted	Result of cases		
		Convicted	Acquitted	Pending Trial
1965	27	23	2	2
1966	20	6	13	1

Sri DIGAMBAR RAO BALWANT RAO.—May I know whether you have received a representation regarding smuggling of food-grains in Lorries into Maharashtra and the connivance of the Police with the same?